**ಓ.ಎಸ್ 144/2010**
**ಡಿ.ಡಬ್ಲೂ-2**

ದಿನಾಂಕಃ**08.07.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲು ವಾದಿ ಪರ ಶ್ರೀ ಕೆ.ಎಸ್. ವಕೀಲರಿಂದಃ**

ವಾದಿಗಳು ನನ್ನ ಸಹೋದರಿಯರು ಎಂದರೆ ಸರಿ. ವಾದಿಗಳು ಈ ದಾವೆಯನ್ನು ಯಾವ ಉದ್ದೇಶಕ್ಕೆ ಹೂಡಿದ್ದಾರೆಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ನನ್ನ ತಾಯಿ, 2 ನೇ ಪ್ರತಿವಾದಿ ನನ್ನ ಸಹೋದರ, 3 ನೇ ಪ್ರತಿವಾದಿ ನಾನು, 4 ನೇ ಪ್ರತಿವಾದಿ ನನ್ನ ಹೆಂಡತಿ. ಐಟಂ ನಂಬರ-1 ನನ್ನ ತಂದೆಗೆ ಬಂದಂತಹ ಜಮೀನು ಎಂದರೆ ಸರಿ. ಐಟಂ ನಂಬರ ಕ್ಕೆ ಸಂಬಂಧಿಸಿದಂತೆ ನನ್ನ ತಂದೆಯ ಮೇಲೆ ವೆಸ್ಲಿಯವರು ಅಸಲು ದಾವೆ 86/1986 ರಂತೆ ದಾವೆ ಹೂಡಿ ನಮ್ಮ ತಂದೆಯ ಪರ ಆಗಿರುತ್ತದೆಂದರೆ ಸರಿ. ಐಟಂ ನಂಬರ 1 ಇನ್ನು ಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಐಟಂ ನಂಬರ 1 ರಲ್ಲಿ ವಾದಿಗಳು 5 ನೇ 1 ಭಾಗ ಹಕ್ಕು ಇದೆ ಎಂದರೆ ಸಾಕ್ಷಿ ಭಾಗವನ್ನು ನೀಡಿದ್ದೇವೆ ಎಂದು ನುಡಿಯುತ್ತಾರೆ. ಸದರಿ ಬಗ್ಗೆ ದಾಖಲೆಯಾದ ಪಾಲುಪಾರಿಕತ್ತನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ಸದರಿ ಪಾಲುಪಾರಿಕತ್ತಗೆ ವಾದಿಗಳು ರುಜು ಮಾಡಿರುವುದಿಲ್ಲ ಎಂದರೆ ಸರಿ. ನಾನು ಮತ್ತು ಪ್ರತಿವಾದಿಗಳು ಮಾಡಿಕೊಂಡಿರುತ್ತೇವೆ ಎಂದರೆ ಸಾಕ್ಷಿ ವಾದಿಗಳು ಇದ್ದರು ಅವರೇ ಹೇಳಿ ಬರೆಸಿರುತ್ತಾರೆಂದು ನುಡಿಯುತ್ತಾರೆ. ಆ ಕಾಲದಲ್ಲಿ ವಾದಿಗಳು ಹಾಜರಿರಿಲ್ಲ ಆದಕಾರಣ ಅವರು ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಮರಣದ ನಂತರ ಐಟಂ ನಂಬರ 1 ನಾನು, ವಾದಿಗಳು ಮತ್ತು ಪ್ರತಿವಾದಿಗಳು 1 ರಿಂದ 3 ರವರು ಒಟ್ಟಿಗೆ ಸ್ವಾಧೀನಾನುಭವ ಇದ್ದೇವೆ ಎಂದರೆ ಸರಿಯಲ್ಲ. ಮುಂದುವರೆದು ಪಾಲುಪಾರಿಕತ್ತು ಆದ ನಂತರ ಅವರ ಅವರ ಭಾಗದಲ್ಲಿ ಇದ್ದೇವೆ ಎಂದು ನುಡಿಯುತ್ತಾರೆ. ಪಾಲು ಪಾರಿಕತ್ತು ಆದ ದಿನಾಂಕ ಮತ್ತು ತಿಂಗಳು ಹೇಳಲಾಗುತ್ತದಾ ಎಂದರೆ ಸಾಕ್ಷಿ 1993 ರಲ್ಲಿ ದಿನಾಂಕ ತಿಂಗಳು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ಹೆಂಡತಿಗೆ 4 ನೇ ಪ್ರತಿವಾದಿಗೆ ಐಟಂ ನಂಬರ 1 ನ್ನು ಖಾತೆ ಮಾಡಿಸಿರುತ್ತೀರಿ ಎಂದರೆ ಸಾಕ್ಷಿ ನನ್ನಪಾಲಿಗೆ ಬಂದಿದ್ದನ್ನು ಖಾತೆ ಮಾಡಿಸಿರುತ್ತೇನೆಂದು ನುಡಿಯುತ್ತಾರೆ. ನಾನು ಮತ್ತು ಪ್ರತಿವಾದಿ 4 ರವರು ಸೇರಿ ದಾಖಲೆಯನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಐಟಂ ನಂಬರ 2 ನನ್ನ ತಂದೆ ಮಾಡುತ್ತಿದ್ದ ಜಮೀನು ಎಂದರೆ ಸಾಕ್ಷಿ ಸರ್ಕಾರ ನನಗೆ ಮಂಜೂರು ಮಾಡಿರುತ್ತದೆಂದು ನುಡಿಯುತ್ತಾರೆ. ಸದರಿ ಜಮೀನನ್ನು ನನ್ನ ತಂದೆ ಮಾಡುತ್ತಿದ್ದರು ಎಂದರೆ ಸುಳ್ಳು. ಅವರ ಮರಣದ ನಂತರ ನನ್ನ ತಾಯಿ 1 ನೇ ಪ್ರತಿವಾದಿ ಮಾಡುತ್ತಿದ್ದರು ಎಂದರೆ ಸುಳ್ಳು. ಸದರಿ ಜಮೀನಿಗೆ ನನ್ನ ತಂದೆ ಚೀಟಿ ಹಣವನ್ನು ಕಟ್ಟಿದ್ದರು ಎಂದರೆ ಸುಳ್ಳು. ನಾನು 1 ನೇ ಪ್ರತಿವಾದಿ ರವರಿಗೆ ಸತ್ಯವನ್ನು ಮರೇಮಾಚಿ ನನ್ನ ಹೆಸರಿಗೆ ಐಟಂ ನಂಬರ-2 ಆಸ್ತಿಯನ್ನು ಖಾತೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸುಳ್ಳು. ನನ್ನ ತಂದೆಯ ಮರಣದ ನಂತರ ನಾನು, ನನ್ನ ತಾಯಿ ಮತ್ತು ನನ್ನ ಅಣ್ಣ ಒಟ್ಟಿಗೆ ವಾಸವಿದ್ದೇವು ಎಂದರೆ ಸಾಕ್ಷಿ ಪಾಲುಪಾರಿಕತ್ತು ಆದನಂತರ ಬೇರೆ ವಾಸ ಇರುತ್ತೇವೆ ಎಂದು ನುಡಿಯುತ್ತಾರೆ. ಐಟಂ ನಂಬರ-2 ಅಕ್ರಮವಾಗಿ ಮಂಜೂರು ಮಾಡಿಸಿಕೊಂಡಿದ್ದು, ಒಟ್ಟಿಗೆ ಇರುವ ಕಾಲದಲ್ಲಿ ಮಾಡಿಸಿಕೊಂಡಿರುತ್ತೇನೆಂದರೆ ಸರಿಯಲ್ಲ.

ಐಟಂ ನಂಬರ-3 ಆಸ್ತಿಯನ್ನು ಕಾಡು ಕಡೆದು ನಮ್ಮ ತಂದೆಯವರು ಜಮೀನು ಮಾಡಿಕೊಂಡಿದ್ದರು ಎಂದರೆ ಸುಳ್ಳು. ಐಟಂ ನಂಬರ-3 ಒಟ್ಟು ಕುಟುಂಬಕ್ಕೆ ಸೇರಿದ್ದು, ನಾನು ಅಕ್ರಮವಾಗಿ ಖಾತೆ ಮಾಡಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ನನ್ನ ತಂದೆಯ ಮರಣದ ನಂತರ ಐಟಂ ನಂಬರ-3 ರ ಆಸ್ತಿಯನ್ನು ನಾನು ಪ್ರತಿವಾದಿಗಳು ಹಾಗೂ ವಾದಿಗಳು ಅನುಭವಿಸುತ್ತಿದ್ದೇವು ಎಂದರೆ ಸುಳ್ಳು.

ಬಿ ಅನುಸೂಚಿ ಐಟಂ ನಂಬರ-1 ನನ್ನ ತಾಯಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ಸದರಿ ಆಸ್ತಿಯನ್ನು ನನ್ನ ತಾಯಿ ವಾದಿಗಳಿಗೆ ನೀಡಿರುತ್ತಾರೆ ಎಂದರೆ ಸರಿ. ಮುಂದುವರೆದು ಸದರಿಯವರಿಗೆ ನಮ್ಮ ತಂದೆ ಆಸ್ತಿಯಲ್ಲಿ ಎರಡು ಎಕರೆ ಹಾಗೂ ಈ ಆಸ್ತಿಯನ್ನು ನೀಡಿರುತ್ತಾರೆಂದು ನುಡಿಯುತ್ತಾರೆ. ನನ್ನ ತಂದೆ ಆಸ್ತಿಯಲ್ಲಿ ಎರಡು ಎಕರೆ ವಾದಿಗಳಿಗೆ ನೀಡಿರುತ್ತೇವೆ ಎಂಬ ಅಂಶ ಸುಳ್ಳು ಎಂದರೆ ಸರಿಯಲ್ಲ. ಬಿ ಅನುಸೂಚಿ ಐಟಂ ನಂಬರ-1 ಜಮೀನು ಸಾಗುವಳಿ ಮಾಡಲು ನಾನು ವಾದಿಗಳಿಗೆ ತೊಂದರೆ ನೀಡುತ್ತಿದ್ದೇನೆಂದರೆ ಸರಿಯಲ್ಲ.

ವಾದಿಗಳು ಹಬ್ಬ ಹರದಿನಗಳಲ್ಲಿ ಪ್ರತಿವಾದಿ 1 ರವರ ಮನೆಗೆ ಬಂದು ಹೋಗುತ್ತಿದ್ದರು ಎಂದರೆ ಸರಿ. ಬಿ ಅನುಸೂಚಿ ಐಟಂ ನಂಬರ-2 ನಮ್ಮ ತಾಯಿಯವರಿಗೆ ಸೇರಿದ ಮನೆ ಎಂದರೆ ಸರಿ. ಸದರಿ ಮನೆಯಲ್ಲಿ ಪ್ರತಿವಾದಿ 1 ರವರು ವಾಸ ಇದ್ದರು ಎಂದರೆ ಸರಿ. ಸದರಿ

ಮನೆ ವಿಚಾರವಾಗಿ ನಾನು ಗಲಾಟೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ನನ್ನ ತಾಯಿಯವರು ನನ್ನ ವಿರುದ್ಧ ದೂರನ್ನು ನೀಡಿದ್ದರು ಎಂದರೆ ಸುಳ್ಳು. ವಾದಿಗಳು ನನ್ನ ಹಾಗೂ ನನ್ನ ತಾಯಿಯನ್ನು ದಾವೆಯನ್ನು ಹೂಡುವ ಮೊದಲು ವಿಭಾಗ ಮಾಡಿಕೊಡಲು ಕೇಳಿದ್ದಕ್ಕೆ ಅವಾಚ್ಯವಾಗಿ ಬೈದಿರುತ್ತೇನೆಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೂ ಹಾಗೂ 4 ನೇ ಪ್ರತಿವಾದಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ದಾವಾ ಆಸ್ತಿಯಲ್ಲಿ ಭಾಗ ನೀಡಬೇಕೆಂದು ಸುಳ್ಳು ತಕರಾರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲವಕಾಶವನ್ನು ಕೋರಿದ್ದರಿಂದ ನೀಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.